JULY 11, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕ ಭಾಗದ ಜನ, ಬರ ಮತ್ತು ನೆರೆ ಸಂಕ ್ಟಕ್ಕೆ ಸಿಲುಕಿ, ಉದ್ಯೋಗ ಅರಸಿ, ಬೃಹನ್ನಗರಗಳತ್ತ ವಲಸೆ ಹೋಗುತ್ತಿದ್ದಾರೆ; ಮುಖ್ಯಮಂತ್ರಿಗಳು, ತುರ್ತಾಗಿ ಗಮನ ಹರಿಸಬೇಕು ಎಂದು, ಕೇಂದ್ರ ಕೈಗಾರಿಕೆ ಖಾತೆ ಸಚಿವ, ಎಚ್.ಡಿ ಕುಮಾರಸ್ವಾಮಿ, ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ, ಆಗ್ರಹಿಸಿದ್ದಾರೆ.

<><><>

ಕೃಷ್ಣರಾಜ ಸಾಗರ, ಕಬಿನಿ, ಹಾರಂಗಿ ಹಾಗೂ ಹೇಮಾವತಿ ಜಲಾಶಯಗಳ, ಸ್ಥಿತಿಗತಿ ಬಗ್ಗೆ ಚರ್ಚಿಸಲು, ಮೈಸೂರು–ಮಂಡ್ಯ ಜಿಲ್ಲೆಗಳ, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಭೆ, ಜಲ ಸಂಪನ್ಮೂಲ ಖಾತೆ ಸಚಿವ, ರಾಮಲಿಂಗಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನ ವಿಧಾನಸೌಧದಲ್ಲಿ ಜರುಗಿತು. ಮೋಡ ಬಿತ್ತನೆ ಬಗ್ಗೆ, ವಿಷಯ ತಜ್ಞರ ಸಲಹೆ ಪಡೆದು, ತೀರ್ಮಾನಿಸಲಾಗುವುದು ಎಂದು, ಸಚಿವ ರಾಮಲಿಂಗಾರೆಡ್ಡಿ, ತಿಳಿಸಿದರು.

<><><>

ಬೆಳಗಾವಿಯ ಅನಗೋಳದ, ಸಂತಮೀರಾ ಶಾಲೆಯಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ, ವಾರ್ಷಿಕ, ಅಖಿಲ ಭಾರತೀಯ ಪ್ರಾಂತ ಪ್ರಚಾರಕರ ಸಭೆ ನಿನ್ನೆ ಆರಂಭಗೊಂಡಿದೆ. ಮೂರು ದಿನಗಳ ಕಾಲ ನಡೆಯುವ ಈ ಸಭೆಯಲ್ಲಿ, ಸರಸಂಘಚಾಲಕ ಮೋಹನ ಭಾಗವತ, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹಾಗೂ 46 ಪ್ರಾಂತ್ಯಗಳಿಂದ, ಪ್ರಾಂತ ಪ್ರಚಾರಕರು ಪಾಲ್ಗೊಂಡಿದ್ದಾರೆ.

<><><>

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ, ರಾಜ್ಯದ ಎಲ್ಲ ನ್ಯಾಯಾಲಯಗಳಲ್ಲಿ, ಇಂದು, ರಾಷ್ಟ್ರೀಯ ಜನತಾ ನ್ಯಾಯಾಲಯ, ಆಯೋಜಿತವಾಗಿದೆ. ರಾಜೀ ಸಂಧಾನದ ಮೂಲಕ, ಕಕ್ಷಿದಾರರ ಸಹಮತಿಯೊಂದಿಗೆ, ವ್ಯಾಜ್ಯ ಪ್ರಕರಣಗಳನ್ನು ಪರಿಹರಿಸಲು, ವಿಚಾರಣೆಗೆ ಇಂದು ನಿಗದಿಗೊಳಿಸಲಾಗಿದೆ.

<><><>

20ನೇ ಸಾಂಖ್ಯಿಕ ದಿನಾಚಾರಣೆ, ರಾಯಚೂರು ಜಿಲ್ಲಾ ಸಾಂಖ್ಯಿಕ ಅಧಿಕಾರಿ ಕಾರ್ಯಾಲಯದಲ್ಲಿ, ನಿನ್ನೆ ಜರುಗಿತು.

<><><>

ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ನೂತನ ಉಪ ಕುಲಪತಿಯಾಗಿ ಬೆಂಗಳೂರು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಹಾಗೂ ಖ್ಯಾತ ಮಣ್ಣು ತಜ್ಞ, ಪ್ರೊಫೆಸರ್ ಎನ್.ಬಿ. ಪ್ರಕಾಶ, ನೇಮಕಗೊಂಡಿದ್ದಾರೆ. ಕೃಷಿಯಲ್ಲಿ ಸಿಲಿಕಾನ್ ಬಳಕೆಯ ಮಹತ್ವ ಕುರಿತ, ಅವರ ಸಂಶೋಧನೆಗಳು, ಅಂತಾರಾಷ್ಟ್ರೀಯ ಮನ್ನಣೆ ಪಡೆದಿವೆ.

<><><>

ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲೂಕು, ದೇವರಕೊಟ್ಟದ ಏಕಲವ್ಯ ಮಾದರಿ ವಸತಿ ಶಾಲೆಗೆ, ಜಿಲ್ಲಾಧಿಕಾರಿ ಟಿ.ವೆಂಕಟೇಶ ಭೇಟಿ ನೀಡಿ, ಪರಿಶೀಲಿಸಿದರು.

<><><>

ಕೇಂದ್ರೀಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ – C.B.S.E., ವಿದ್ಯಾರ್ಥಿಗಳಿಗೆ, ವಿಜ್ಞಾನ ಮತ್ತು ಗಣಿತ ವಿಷಯಗಳ ಪ್ರಾಯೋಗಿಕ ಕಲಿಕೆ ಹಾಗೂ ಆಸಕ್ತಿ ಉದ್ದೀಪಿಸಲು, ಆಂಧ್ರಪ್ರದೇಶದ ಕುಪ್ಪಂನ, ಅಗಸ್ತ್ಯ ಅಂತಾರಾಷ್ಟ್ರೀಯ ವಿಜ್ಞಾನ ಕೇಂದ್ರದಲ್ಲಿ, National Innovative Education Conclave ನಾಲ್ಕು ದಿನಗಳ ಕಾಲ, ಆಯೋಜಿಸಿತ್ತು. ಧಾರವಾಡದ ಪ್ರೆಸೆಂಟೇಷನ್ ಕಾನ್ವೆಂಟ್, ಹೆಣ್ಣು ಮಕ್ಕಳ ಆಂಗ್ಲ ಮಾಧ್ಯಮ, ಸಿ.ಬಿ.ಎಸ್.ಇ. ಶಾಲೆಯ, 9ನೇ ತರಗತಿ ವಿದ್ಯಾರ್ಥಿನಿ, ಜೆ.ಎಚ್. ಭೂಮಿ, ಶಿಕ್ಷಕಿಯರಾದ ದೀಪಾ ಮತ್ತು ಸಿಸ್ಟರ್ ರುಫಿನಾ ಮಾರ್ಗದರ್ಶನದಲ್ಲಿ, ಈ ರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಪ್ರದೇಶ ಸಮಾಚಾರಕ್ಕಾಗಿ, ಭೂಮಿ ಜೆ.ಎಚ್. ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಭೂಮಿ ಜೆ.ಎಚ್. ಧ್ವನಿ 45 ಸೆಕೆಂದುಗಳು

<><><>

ರಾಷ್ಟ್ರಗೀತೆ ಜನ ಗಣ ಮನ ಹಾಗೂ ರಾಷ್ಟ್ರೀಯ ಗೀತೆ ವಂದೇ ಮಾತರಂ, ಹಾಡುವಾಗ ಅಥವಾ ನುಡಿಸುವಾಗ, ಅವುಗಳ ಸರಿಯಾದ ಲಿಪಿ, ಪಠ್ಯ, ಶಬ್ದ ಪ್ರಯೋಗ ಮತ್ತು ಉಚ್ಚಾರಣೆಯನ್ನು, ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು, ಕೇಂದ್ರ ಗೃಹ ಇಲಾಖೆ, ಆದೇಶಿಸಿದೆ. ಸರಿಯಾದ ಪಠ್ಯ ಮತ್ತು ಉಚ್ಚಾರಣೆಗೆ ಸಂಬಂಧಿಸಿದ, ಮಾರ್ಗದರ್ಶಿಯನ್ನು, ಕೇಂದ್ರ ಗೃಹ ಸಚಿವಾಲಯ, ತನ್ನ ಜಾಲತಾಣದಲ್ಲಿ, ಪ್ರಕಟಿಸಿದೆ.

<><><>

ಧಾರವಾಡದ, ಹಾಲಗೇರಿ ಹನುಮಂತದೇವರ ಕೆರೆಯಲ್ಲಿ, 5 ಎಕರೆ 35 ಗುಂಟೆ ಜಾಗೆಯಲ್ಲಿ, ಸುಸಜ್ಜಿತ ಮಾರುಕಟ್ಟೆ ರೂಪಿಸುವಂತೆ, ಧಾರವಾಡ ವಾಣಿಜ್ಯೋದ್ಯಮ ಸಂಘದ ಕಾರ್ಯದರ್ಶಿ, ರವೀಂದ್ರ ಆಕಳವಾಡಿ ಆಗ್ರಹಿಸಿದ್ದಾರೆ. ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಸೂಪರ್ ಮಾರುಕಟ್ಟೆ ಅಭಿವೃದ್ಧಿ ಕುರಿತು ಆಯೋಜಿಸಿದ್ದ, ಚಿಂತನ ಸಭೆಯಲ್ಲಿ ಅವರು ಮಾತನಾಡಿದರು. ಬಹು ಮಹಡಿ ವಾಣಿಜ್ಯ ಸಂಕೀರ್ಣದ ಬದಲು, ಬಹು ಉದ್ದೇಶಿತ ಕಟ್ಟಡ ನಿರ್ಮಿಸುವುದು ಸೂಕ್ತ, ಎಂದರು.

<><><>

ಕೋಲಾರ ಗೋಲ್ಡ್ ಫೀಲ್ಡ್ಸ್ ನಲ್ಲಿ, ನಾಳೆ ಬೆಳಗ್ಗೆ, 'ಕೆ.ಜಿ.ಎಫ್. ಅಲ್ಟ್ರಾ ಮ್ಯಾರಾಥಾನ್' ನಡೆಯಲಿದ್ದು, ಸಾವಿರದ 500 ಕ್ಕೂ ಹೆಚ್ಚು, ಓಟಗಾರರು ಪಾಲ್ಗೊಳ್ಳಲಿದ್ದಾರೆ ಎಂದು ಸಂಘಟಕ, ಕಮಲನಾಥನ್ ತಿಳಿಸಿದ್ದಾರೆ.

<><><>

ಕಲಬುರಗಿಯ ಡಾಕ್ಟರ್ ಎಸ್.ಎಂ. ಪಂಡಿತ ರಂಗಮಂದಿರದಲ್ಲಿ, ಇಂದು ಸಂಜೆ 6 ಗಂಟೆಗೆ, ಸ್ವಾತಂತ್ರ್ಯ ಓಟ ನಾಟಕ ಪ್ರದರ್ಶನಗೊಳ್ಳಲಿದೆ ಎಂದು, ಕಲಬುರಗಿ ರಂಗಾಯಣದ ನಿರ್ದೇಶಕಿ, ಸುಜಾತಾ ಜಂಗಮಶೆಟ್ಟಿ ತಿಳಿಸಿದ್ದಾರೆ.

<><><>

ಕರ್ನಾಟಕ ಕುಲಪುರೋಹಿತ, ಆಲೂರು ವೆಂಕಟರಾಯರ, 146ನೇ ಜನ್ಮದಿನಾಚರಣೆ, ನಾಳೆ ಭಾನುವಾರ, ಬೆಳಗ್ಗೆ 10.30ಕ್ಕೆ, ಧಾರವಾಡದ, ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಜರುಗಲಿದೆ. ಹಿರಿಯ ಸಾಹಿತಿ, ಡಾಕ್ಟರ್ ಸಿದ್ಧಲಿಂಗ ಪಟ್ಟಣಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕರ್ನಾಟಕ ಏಕೀಕರಣ ಹೋರಾಟಗಾರರು, ವ್ಯಕ್ತಿಚಿತ್ರ ಮಾಲೆಯಡಿ, ಮರು ಮುದ್ರಿತ, ಡೆಪ್ಯುಟಿ ಚೆನ್ನಬಸಪ್ಪ ಹಾಗೂ ಆಲೂರು ವೆಂಕಟರಾಯರ, ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.